# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 120 | Pages. 2 | Date: 14-04-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 120 - ಪುಟಗಳು : 2 | 14-04-2026 | ಮಂಗಳವಾರ | Ph: 8762954248 | ದರ : ₹1


### 30 ವರ್ಷಗಳಿಂದ ಖಾತೆ ಆಗಿಲ್ಲ : ಗ್ರಾಮ ಆಡಳಿತಾಧಿಕಾರಿಗಳಿಂದ ಮಾಹಿತಿ ಸಂಗ್ರಹ

## ಕಂದಾಯ ಇಲಾಖೆ ನಿರ್ಲಕ್ಷ್ಯಕ್ಕೆ ರೇವಣ್ಣ ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕಂದಾಯ ಇಲಾಖೆಯಲ್ಲಿ ಹಲವು ವರ್ಷಗಳಿಂದ ರೈತರ ಸಮಸ್ಯೆಗಳು ಬಗೆಹರಿಯದೆ ಉಳಿದಿರುವ ಪ್ರಕರಣಗಳನ್ನು 15 ದಿನಗಳೊಳಗೆ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಎಚ್ಚರಿಕೆ ನೀಡಿದರು.

ನಗರದ ತಾಲೂಕು ಕಚೇರಿಯಲ್ಲಿ ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ತಮ್ಮ ವಿಧಾನಸಭಾ ಕ್ಷೇತ್ರದ ವಿವಿಧ ಹೋಬಳಿಗಳಲ್ಲಿ 30ರಿಂದ 40 ವರ್ಷಗಳಿಂದ ಪಹಣಿ, ದುರಸ್ತಿ, ಪೋಡಿ ಸೇರಿದಂತೆ ಹಲವು ರೈತರ ಸಮಸ್ಯೆಗಳು ಬಾಕಿ ಉಳಿದಿವೆ. ರೈತರು ಪ್ರತಿದಿನ ತಾಲೂಕು ಕಚೇರಿ ಅಲೆದಾಡುತ್ತಾ ಬೇಸತ್ತಿದ್ದಾರೆ. ಈ ನಡುವೆ ತಾಲೂಕು ಹಾಗೂ ಜಿಲ್ಲಾಡಳಿತ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಪ್ರಶ್ನಿಸಿದರು.

ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ. ಆದರೆ ಹಣವಿರುವವರ ಹಾಗೂ ಗಣಿಗೆ ಸಂಬಂಧಿಸಿದ ಕಡತಗಳನ್ನು ತಕ್ಷಣವೇ ವಿಲೇವಾರಿ ಮಾಡಲಾಗುತ್ತಿದೆ. ರೈತರ ಕಡತಗಳನ್ನು ದಶಕಗಳ ಕಾಲ ಕಚೇರಿಯಲ್ಲಿ ಇಟ್ಟುಕೊಂಡು ಅಲೆದಾಡಿಸಲಾಗುತ್ತಿದೆ ಎಂದು ಆರೋಪಿಸಿದರು.

ಅರಣ್ಯ ಇಲಾಖೆಯ ಅಧಿಕಾರಿಗಳೂ ರೈತರಿಗೆ ತೊಂದರೆ ನೀಡುತ್ತಿರುವುದಾಗಿ ಆರೋಪಿಸಿದ ಅವರು, ಕೆಲವು ಅಧಿಕಾರಿಗಳು ಹಣದ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹವರಿಂದ ರೈತರಿಗೆ ನ್ಯಾಯ ಸಿಗುವುದು ಹೇಗೆ ಎಂದು ಕಿಡಿಕಾರಿದರು.

ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಹಸಿಲ್ದಾರರು ಮೊದಲಿಗೆ ಕಂದಾಯ ಇಲಾಖೆಯ ಸಮಸ್ಯೆಗಳನ್ನು ಬಗೆಹರಿಸಲು ಆದ್ಯತೆ ನೀಡಬೇಕು.

ತಿಂಗಳಿಗೆ ಒಮ್ಮೆ ಜನಸಂಪರ್ಕ ಸಭೆ ನಡೆಸುವುದರಿಂದ ಯಾವುದೇ ಪ್ರಯೋಜವಾಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಅಧಿಕಾರಿಗಳ ಅಕ್ರಮಗಳನ್ನು ಬಯಲು ಮಾಡಲಾಗುವುದು ಎಂದು ಎಚ್ಚರಿಸಿದರು.

ತಾಲೂಕು ಕಚೇರಿಯಲ್ಲಿ ಕೆಲವು ಅಧಿಕಾರಿಗಳು ಕಡತ ತಿದ್ದುಪಡಿ ಹಾಗೂ ಪ್ರಭಾವಿಗಳ ಕೆಲಸಗಳಿಗೆ ಮಾತ್ರ ಆದ್ಯತೆ ನೀಡುತ್ತಿದ್ದಾರೆ.

ವೃದ್ಧಾಪ್ಯ ವೇತನ ಸೇರಿದಂತೆ ಎಲ್ಲಾ ಸಮಸ್ಯೆಗಳನ್ನು 15 ದಿನಗಳೊಳಗೆ ಬಗೆಹರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚಿಸಿದರು.

ಹಾಸನ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸುತ್ತಮುತ್ತ ಭೂಮಿಗಳನ್ನು ಪ್ರಭಾವಿಗಳು ಖರೀದಿಸುತ್ತಿದ್ದು, ಇದರಿಂದ ಭವಿಷ್ಯದಲ್ಲಿ ಭೂಮಿ ಸಿಗದ ಪರಿಸ್ಥಿತಿ ನಿರ್ಮಾಣವಾಗಲಿದೆ. ಕೆಲವರು ಲ್ಯಾಂಡ್ ಮಾಫಿಯಾದೊಂದಿಗೆ ಕೈಜೋಡಿಸಿದ್ದಾರೆ.

ಈ ಬಗ್ಗೆ ಮುಂದಿನ ದಿನಗಳಲ್ಲಿ ಬಹಿರಂಗಪಡಿಸುವುದಾಗಿ ರೇವಣ್ಣ ಎಚ್ಚರಿಸಿದರು.

ಚನ್ನರಾಯಪಟ್ಟಣ ತಾಲೂಕಿನ ದಂಡಿಗನಹಳ್ಳಿ ಹೋಬಳಿಯಲ್ಲಿ ಸುಮಾರು 1200 ಪ್ರಕರಣಗಳು ಬಾಕಿ ಉಳಿದಿದ್ದು, ಹಾಸನ ತಾಲೂಕಿನ ದುದ್ದ ಮತ್ತು ಶಾಂತಿಗ್ರಾಮದಲ್ಲಿಯೂ ಹಲವು ವರ್ಷಗಳಿಂದ ಸಮಸ್ಯೆಗಳು ಬಗೆಹರಿಯದೆ ಉಳಿದಿವೆ. ಇವುಗಳನ್ನು ತ್ವರಿತಗತಿಯಲ್ಲಿ ಪರಿಹರಿಸಬೇಕು ಎಂದು ಸೂಚಿಸಿದರು.

ಬೇಸಿಗೆ ಹಿನ್ನೆಲೆ ಕುಡಿಯುವ ನೀರು, ಪಶುಗಳಿಗೆ ಮೇವು ಹಾಗೂ ಇಂಧನ ಸಮಸ್ಯೆಗಳತ್ತ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ತಹಸಿಲ್ದಾರ್ ಗೀತಾ, ಉಪ ತಹಸಿಲ್ದಾರ್, ಶಿರಸ್ತೇದಾರರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಟ್ಟಡ ನಿಯಮ ಸಡಿಲಿಕೆಗೆ ಆಗ್ರಹ

### ಹಾಸನದಲ್ಲಿ ಸಾರ್ವಜನಿಕರ ಬೃಹತ್ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಕಟ್ಟಡ ನಿರ್ಮಾಣ ವಲಯ ನಿಯಮಾವಳಿಗಳನ್ನು ಸಡಿಲಗೊಳಿಸುವಂತೆ ಆಗ್ರಹಿಸಿ ಸಾರ್ವಜನಿಕರು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಜಿಲ್ಲಾಡಳಿತಕ್ಕೆ ಈ ಕುರಿತು ವಿಸ್ತೃತ ಮನವಿ ಸಲ್ಲಿಸಿ ತಮ್ಮ ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ನಗರಸಭೆ ಮಾಜಿ ಸದಸ್ಯ ಹೆಚ್.ಎಂ. ಸುರೇಶ್ ಕುಮಾರ್, ಪ್ರಸ್ತುತ ಜಾರಿಯಲ್ಲಿರುವ ಸೆಟ್‌ಬ್ಯಾಕ್ ನಿಯಮಗಳು ಸಾಮಾನ್ಯ ಮತ್ತು ಮಧ್ಯಮ ವರ್ಗದ ಜನರಿಗೆ ಮಾರಕವಾಗಿವೆ ಎಂದು ದೂರಿದರು. "ಜನರು ತಮ್ಮ ಜೀವನಪೂರ್ತಿಯ ಗಳಿಕೆಯನ್ನು ಖರ್ಚು ಮಾಡಿ ಒಂದು ಪುಟ್ಟ ಮನೆ ಕಟ್ಟಿಕೊಳ್ಳಲು ಮುಂದಾದರೆ, ಕಠಿಣ ನಿಯಮಗಳು ಅವರ ಕನಸಿಗೆ ಅಡ್ಡಿಯಾಗುತ್ತಿವೆ. ಇದರಿಂದಾಗಿ ಅನೇಕರು ಮನೆ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸುವಂತಾಗಿದೆ," ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕಟ್ಟಡ ನಿರ್ಮಾಣ ಚಟುವಟಿಕೆಗಳು ಕುಂಠಿತಗೊಂಡಿರುವುದರಿಂದ ಕೇವಲ ಮನೆ ಮಾಲೀಕರು ಮಾತ್ರವಲ್ಲದೆ, ಈ ಕ್ಷೇತ್ರವನ್ನೇ ನಂಬಿಕೊಂಡಿರುವ ಸಾವಿರಾರು ಜನರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಸಿವಿಲ್ ಇಂಜಿನಿಯರ್‌ಗಳು, ಕಂಟ್ರಾಕ್ಟರ್‌ಗಳು, ಗಾರೆ ಕೆಲಸದವರು, ಟೈಲ್ಸ್ ಮತ್ತು ಮರಗೆಲಸ ಮಾಡುವವರು, ಪ್ಲಂಬರ್‌ಗಳು ಹಾಗೂ ಎಲೆಕ್ಟ್ರಿಷಿಯನ್‌ಗಳು ಕೆಲಸವಿಲ್ಲದೆ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ.

ಕಟ್ಟಡ ಸಾಮಗ್ರಿಗಳ ವ್ಯಾಪಾರಸ್ಥರಿಗೂ ಈ ಬೆಳವಣಿಗೆಯಿಂದ ವ್ಯಾಪಾರದಲ್ಲಿ ಭಾರೀ ಹಿನ್ನಡೆಯಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಕೆಲವು ಕಟ್ಟಡ ನಿಯಮಗಳಲ್ಲಿ ಸಡಿಲಿಕೆ ನೀಡಲಾಗಿದೆ. ಅದೇ ಮಾದರಿಯನ್ನು ಹಾಸನ ಮಹಾನಗರ ಪಾಲಿಕೆಯಲ್ಲೂ ಜಾರಿಗೊಳಿಸಬೇಕು ಎಂಬುದು ಸಾರ್ವಜನಿಕರ ಪ್ರಮುಖ ಬೇಡಿಕೆಯಾಗಿದೆ.

ನಿಯಮಗಳಲ್ಲಿ ಸಡಿಲಿಕೆ ತರುವುದರಿಂದ ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಮತ್ತೆ ಚೈತನ್ಯ ಸಿಗಲಿದ್ದು, ಸಾವಿರಾರು ಕಾರ್ಮಿಕರಿಗೆ ಉದ್ಯೋಗಾವಕಾಶಗಳು ಮರುಕಳಿಸಲಿವೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣವೇ ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಲಾಗಿದೆ.

ಪ್ರತಿಭಟನೆಯಲ್ಲಿ ಮುಖಂಡರಾದ ಸುನೀಲ್, ಕೃಷ್ಣಕುಮಾರ್, ಮಳಲಿ ಶರತ್, ಸತೀಶ್, ಸಿ.ಕೆ. ಕಿರಣ್ ಕುಮಾರ್, ಚಿಕ್ಕೇಗೌಡ ಹಾಗೂ ನೂರಾರು ಸಾರ್ವಜನಿಕರು ಪಾಲ್ಗೊಂಡಿದ್ದರು.

## 1.65 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ತಾಲೂಕಿನ ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಹಳ್ಳಿ ಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ನೀರಾವರಿ ಸೌಲಭ್ಯ ವಿಸ್ತರಣೆಗೆ ಮಹತ್ವದ ಹೆಜ್ಜೆಯಾಗಿ ಒಟ್ಟು ಸುಮಾರು 1 ಕೋಟಿ 65 ಲಕ್ಷ ರೂಪಾಯಿ ವೆಚ್ಚದ ಎರಡು ಪ್ರಮುಖ ಕಾಮಗಾರಿಗಳಿಗೆ ಸೋಮವಾರದಂದು ಭೂಮಿ ಪೂಜೆ ನೆರವೇರಿಸಲಾಯಿತು.

ಮೊದಲನೆಯದಾಗಿ, ಗ್ರಾಮದಲ್ಲಿರುವ ಹೊಸಕಟ್ಟೆ ಕೆರೆಯನ್ನು 53 ಲಕ್ಷ ರೂ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಲಾಯಿತು. ಈ ಕೆರೆ ಅಭಿವೃದ್ಧಿ ಕಾರ್ಯದಲ್ಲಿ ಕೆರೆಯ ಆಳ ಹೆಚ್ಚಿಸುವುದು, ಬಂಡೆಗೋಡೆ ಬಲಪಡಿಸುವುದು, ನೀರು ಸಂಗ್ರಹ ಸಾಮರ್ಥ್ಯ ವೃದ್ಧಿ ಮಾಡುವಂತಹ ಪ್ರಮುಖ ಕೆಲಸಗಳು ಕೈಗೊಳ್ಳಲಾಗುತ್ತವೆ. ಇದರ ಪರಿಣಾಮವಾಗಿ ಮಳೆಯ ಸಮಯದಲ್ಲಿ ಹೆಚ್ಚು ನೀರನ್ನು ಸಂಗ್ರಹಿಸಲು ಸಾಧ್ಯವಾಗುವುದರೊಂದಿಗೆ, ಬೇಸಿಗೆ ವೇಳೆಯಲ್ಲೂ ನೀರಿನ ಲಭ್ಯತೆ ಹೆಚ್ಚಾಗಲಿದೆ ಎಂದರು. ಇದೇ ವೇಳೆ, ಹೊಸಹಳ್ಳಿ ಗ್ರಾಮದಲ್ಲಿ 1 ಕೋಟಿ 12 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ ಚೆಕ್ ಡ್ಯಾಂ ಕಾಮಗಾರಿಗೂ ಭೂಮಿ ಪೂಜೆ ನೆರವೇರಿಸಲಾಯಿತು. ಈ ಚೆಕ್ ಡ್ಯಾಂ ನಿರ್ಮಾಣದಿಂದ ಮಳೆನೀರಿನ ಹರಿವು ನಿಯಂತ್ರಣಗೊಂಡು, ನೀರು ನೆಲದೊಳಗೆ ಜೀರ್ಣವಾಗುವ ಪ್ರಮಾಣ ಹೆಚ್ಚುತ್ತದೆ. ಇದರ ಮೂಲಕ ಭೂಗರ್ಭ ಜಲಮಟ್ಟ ಏರಿಕೆಯಾಗಲಿದ್ದು, ಸುತ್ತಮುತ್ತಲಿನ ಬಾವಿಗಳು ಹಾಗೂ ಬೋರ್‌ವೆಲ್‌ಗಳಿಗೆ ನೀರು ತುಂಬುವ ಸಾಧ್ಯತೆ ಹೆಚ್ಚುತ್ತದೆ.

ಈ ಎರಡೂ ಯೋಜನೆಗಳು ಪೂರ್ಣಗೊಂಡ ನಂತರ ಸುಮಾರು 50 ಎಕರೆ ಕೃಷಿಭೂಮಿಗೆ ನೇರ ಹಾಗೂ ಪರೋಕ್ಷವಾಗಿ ನೀರಾವರಿ ಸೌಲಭ್ಯ ದೊರೆಯಲಿದೆ. ಇದರಿಂದ ರೈತರು ವರ್ಷಪೂರ್ತಿ ಕೃಷಿ ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಾಗಲಿದ್ದು, ಬೆಳೆ ಉತ್ಪಾದನೆ ಹೆಚ್ಚುವ ನಿರೀಕ್ಷೆಯಿದೆ. ವಿಶೇಷವಾಗಿ ಬರಗಾಲದ ಸಮಯದಲ್ಲಿ ನೀರಿನ ಕೊರತೆ ಕಡಿಮೆಯಾಗುವ ಮೂಲಕ ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಗ್ರಾಮಸ್ಥರು ಈ ಕಾಮಗಾರಿಗಳನ್ನು ಬಹುಕಾಲದಿಂದ ನಿರೀಕ್ಷಿಸುತ್ತಿದ್ದು, ಇದೀಗ ಭೂಮಿ ಪೂಜೆ ನೆರವೇರಿರುವುದು ಸಂತೋಷ ತಂದಿದೆ ಎಂದು ಅಭಿಪ್ರಾಯಪಟ್ಟರು.

ನೀರಿನ ಸಂರಕ್ಷಣೆ ಹಾಗೂ ಸಮರ್ಪಕ ಬಳಕೆ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂಬ ಮಾತುಗಳು ಕೂಡ ಕಾರ್ಯಕ್ರಮದಲ್ಲಿ ಕೇಳಿಬಂದವು. ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರು, ಗ್ರಾಮ ಪಂಚಾಯಿತಿ ಸದಸ್ಯರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ನಾಳೆಯಿಂದ ಮೂರು ದಿನ ಕಾಲೇಜು ರಂಗ

### ಯುವ ಮನಸ್ಸುಗಳ ರಂಗ ಸುಗ್ಗಿಗೆ ಭಾರೀ ಸಿದ್ಧತೆ: ಶಾಡ್ರಾಕ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಜೀವ ತುಂಬುವ ಉದ್ದೇಶದಿಂದ ನಾಟ್ಯ ವೈಭವ ಕಾಲೇಜು ರಂಗ, ಯುವ ಮನಸ್ಸುಗಳ ರಂಗ ಸುಗ್ಗಿ ಎಂಬ ಮಹತ್ವಾಕಾಂಕ್ಷಿ ನಾಟಕೋತ್ಸವವನ್ನು ಆಯೋಜಿಸಲಾಗಿದ್ದು, ಮೂರು ದಿನಗಳ ಕಾಲ ನಡೆಯಲಿರುವ ಈ ರಂಗಮಹೋತ್ಸವವು ಕಲಾಭಿಮಾನಿಗಳಲ್ಲಿ ಈಗಾಗಲೇ ಭಾರೀ ಕುತೂಹಲ ಮೂಡಿಸಿದೆ ಎಂದು ರಂಗ ಕಲಾ ಪೋಷಕ ಶಾಡ್ರಾಕ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ರಂಗಸಿರಿ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮವು ಆಗಸ್ಟ್ 14, 15 ಹಾಗೂ 16ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ವೈಭವೋಪೇತವಾಗಿ ನಡೆಯಲಿದೆ. ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಸಿದ್ಧರಾಗಿದ್ದು, ಯುವ ಮನಸ್ಸುಗಳ ರಂಗಪ್ರತಿಭೆಗೆ ಇದು ದೊಡ್ಡ ವೇದಿಕೆಯಾಗಿ ಪರಿಣಮಿಸುವ ನಿರೀಕ್ಷೆ ಇದೆ ಎಂದರು. ಕಾರ್ಯಕ್ರಮದ ಪ್ರಥಮ ದಿನವನ್ನು ಕ್ಷೇತ್ರದ ಶಾಸಕ ಹೆಚ್.ಪಿ. ಸ್ವರೂಪ್ ಉದ್ಘಾಟಿಸಲಿದ್ದು, ದ್ವಿತೀಯ ದಿನದ ನಾಟಕೋತ್ಸವಕ್ಕೆ ಸಕಲೇಶಪುರ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠಲಮೂರ್ತಿ ಅವರ ಘನ ಉಪಸ್ಥಿತಿ ಇರಲಿದ್ದು, ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀನಿವಾಸ್ ಜಿ. ಕಪ್ಪಣ್ಣ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿರುವ ಈ ಕಾರ್ಯಕ್ರಮದಲ್ಲಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಸೇರಿದಂತೆ ಅನೇಕ ಗಣ್ಯರು, ಶಿಕ್ಷಣ ತಜ್ಞರು ಹಾಗೂ ಕಲಾಭಿಮಾನಿಗಳು ಭಾಗವಹಿಸಲಿದ್ದಾರೆ. ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಮಂಜಯ್ಯ ಡಿ.ಕೆ., ಸಕಲೇಶಪುರ ಸರ್ಕಾರಿ ಕಾಲೇಜಿನ ಪ್ರಾಂಶುಪಾಲ ಸಹನ ಹೆಚ್.ಎಂ., ಜ್ಞಾನಧಾರ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಮಧುಸೂದನ್ ಹಾಗೂ ಟೈಮ್ಸ್ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಗಂಗಾಧರ ಬಿ.ಕೆ. ಸೇರಿದಂತೆ ಅನೇಕರು ಉಪಸ್ಥಿತರಿರಲಿದ್ದಾರೆ. ಮೂರು ದಿನಗಳ ಈ ನಾಟಕೋತ್ಸವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಅಭಿನಯ ಕೌಶಲ್ಯವನ್ನು ಅನಾವರಣಗೊಳಿಸಲಿದ್ದಾರೆ. ಸಾಮಾಜಿಕ ಸಂದೇಶ, ಸಾಹಿತ್ಯಾಧಾರಿತ ಕಥಾಹಂದರ ಹಾಗೂ ಅನುವಾದಿತ ನಾಟಕಗಳ ಮೂಲಕ ಪ್ರೇಕ್ಷಕರನ್ನು ಆಕರ್ಷಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಏಪ್ರಿಲ್ 14ರ ಮಂಗಳವಾರದಂದು ಮಧ್ಯಾಹ್ನ 1 ಗಂಟೆಗೆ ಪ್ರಥಮ ದಿನ ಜ್ಞಾನಧಾರ ಪ್ಯಾರಾಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಂದ ''ನನ್ನ ಅಂಬೇಡ್ಕರ್'' ನಾಟಕ ಪ್ರದರ್ಶನಗೊಳ್ಳಲಿದ್ದು, ಕೋಟಿಗಾನಹಳ್ಳಿ ರಾಮಯ್ಯ ಅವರ ಸಾಹಿತ್ಯ ಮತ್ತು ಬಾಬಾಸಾಹೇಬ್ ಕಾಂಬಳೆ ಅವರ ಸಂಗೀತ ನಿರ್ದೇಶನ ವಿಶೇಷ ಆಕರ್ಷಣೆಯಾಗಲಿದೆ.

ಏಪ್ರಿಲ್ 15ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರಿಂದ ''ಲೋಕಾಯುಕ್ತರು ಬರುತ್ತಾರೆ'' ಎಂಬ ನಾಟಕ ಪ್ರದರ್ಶನಗೊಳ್ಳಲಿದೆ. ಈ ನಾಟಕವು ಬಿಕೊಲಾಯ್ ಗೊಗಲ್ ಅವರ ಕೃತಿಯ ಕನ್ನಡ ರೂಪಾಂತರವಾಗಿದ್ದು, ಧನಂಜಯ ದಿಯಾನ್ ಅವರ ಸಂಗೀತ ಮತ್ತು ನಿರ್ದೇಶನದಲ್ಲಿ ವೇದಿಕೆಯೇರಲಿದೆ. ಅದೇ ದಿನ ಮಧ್ಯಾಹ್ನ 12 ಗಂಟೆಗೆ ದ್ವಿತೀಯ ದಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ''ಸರಸತಿಯಾಗಲೊಲ್ಲೆ'' ನಾಟಕ ಪ್ರದರ್ಶನವಾಗಲಿದ್ದು, ಡಾ. ಎಂ. ಭೈರೇಗೌಡ ಅವರ ರಚನೆಗೆ ಮಂಜು ಸಿರಿಗೆರೆ ಸಂಗೀತ ಮತ್ತು ನಿರ್ದೇಶನ ನೀಡಲಿದ್ದಾರೆ ಎಂದು ಹೇಳಿದರು ಹಾಗೂ ಏಪ್ರಿಲ್ 16ರ ಗುರುವಾರದಂದು ಸೆಂಟ್ರಲ್ ಕಾಮರ್ಸ್ ಕಾಲೇಜು ವಿದ್ಯಾರ್ಥಿಗಳಿಂದ ಲೇಖಕ ಪ್ರಕಾಶ್ ಜಿ. ಅವರ ಕಾದಂಬರಿಯನ್ನು ಆಧರಿಸಿದ ನನ್ಸಿರಿ ನಾಟಕವನ್ನು ಧನಂಜಯ ದಿಯಾನ್ ಅವರ ನಿರ್ದೇಶನದಲ್ಲಿ ಪ್ರದರ್ಶಿಸಲಾಗುವುದು.

ಮೂರನೇ ದಿನ ನಡೆಯಲಿರುವ ಸಮಾರೋಪ ಸಮಾರಂಭವು ವಿಶೇಷವಾಗಿರಲಿದ್ದು, ಹಾಸನ ಲೋಕಾಯುಕ್ತರಾಗಿರುವ ಡಾ. ಬಿ.ಎನ್. ನಂದಿನಿ ಅವರು ಘನ ಉಪಸ್ಥಿತಿ ವಹಿಸಲಿದ್ದಾರೆ.

ಜೊತೆಗೆ ಬುಕರ್ ಪ್ರಶಸ್ತಿ ವಿಜೇತ ಬುಕರ್ ಪ್ರಶಸ್ತಿ ವಿಜೇತರಾದ ಭಾನು ಮುಷ್ತಾಕ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಇನ್ನೂ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮದನಗೌಡ ಹೆಚ್.ಬಿ., ಹಿರಿಯ ಕಲಾವಿದ ಗುಂಡಣ್ಣ, ಪ್ರಸೂತಿ ತಜ್ಞೆ ಡಾ. ಸಾವಿತ್ರಿ ಎ., ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆಂಚೇಗೌಡ ಜೆ.ಎಂ. ಸೇರಿದಂತೆ ಹಲವಾರು ಗಣ್ಯರು ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ''ನಾಟ್ಯ ವೈಭವ'' ಕಾರ್ಯಕ್ರಮವು ಕೇವಲ ನಾಟಕೋತ್ಸವವಷ್ಟೇ ಅಲ್ಲ, ಯುವಜನರಲ್ಲಿ ರಂಗಭೂಮಿಯ ಮೇಲಿನ ಆಸಕ್ತಿ ಹೆಚ್ಚಿಸುವ, ಹೊಸ ಪ್ರತಿಭೆಗಳನ್ನು ಪರಿಚಯಿಸುವ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಮಹತ್ವದ ವೇದಿಕೆಯಾಗಿದೆ.

ಹಾಸನದಲ್ಲಿ ಇಂತಹ ಕಾರ್ಯಕ್ರಮಗಳ ಆಯೋಜನೆ ಹೆಚ್ಚುತ್ತಿರುವುದು ಸಾಂಸ್ಕೃತಿಕ ಬೆಳವಣಿಗೆಯ ಸೂಚಕವಾಗಿದ್ದು, ವಿದ್ಯಾರ್ಥಿಗಳಲ್ಲಿರುವ ಕಲಾತ್ಮಕ ಪ್ರತಿಭೆಗೆ ಪ್ರೋತ್ಸಾಹ ನೀಡುವ ದಿಶೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಒಟ್ಟಾರೆ, ಮೂರು ದಿನಗಳ ಕಾಲ ನಡೆಯಲಿರುವ ''ನಾಟ್ಯ ವೈಭವ'' ಕಾರ್ಯಕ್ರಮವು ಹಾಸನ ಜಿಲ್ಲೆಯ ರಂಗಭೂಮಿಗೆ ಹೊಸ ಚೈತನ್ಯ ತುಂಬಲಿದ್ದು, ಕಲಾಭಿಮಾನಿಗಳಿಗೆ ರಂಗರಂಜಕ ಅನುಭವವನ್ನು ನೀಡಲಿದೆ ಎಂದು ಮೂರು ದಿನದ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಜ್ಞಾನಧಾರ ಪ್ಯಾರಾಮೆಡಿಕಲ್ ಕಾಲೇಜು ಪ್ರಾಂಶುಪಾಲ ಮಧುಸೂದನ್, ಸೆಂಟ್ರಲ್ ಕಾಮರ್ಸ್ ಕಾಲೇಜು ಪಾಂಶುಪಾಲ ಚಂದ್ರಕಾಂತ್ ಪಡೆಸೂರ್, ಕಲಾ ಪೋಷಕ ಹಾಗೂ ಸಾಹಿತಿ ಚಲಂ ಹಾಡ್ಲಹಳ್ಳಿ, ಕಸಾಪ ಮಾಜಿ ಗೌರವಾಧ್ಯಕ್ಷ ರವಿನಾಕಲಗೂಡು ಇತರರು ಉಪಸ್ಥಿತರಿದ್ದರು.

## ಅಂಬೇಡ್ಕರ್ ಜಯಂತಿ

### ಸಮಾನತೆಗಾಗಿ ಹೋರಾಟದ ಪ್ರತೀಕ



**ಅಂತೋಣಿ ಮುತ್ತು ವಿ**
**ಪ್ರಾಂಶುಪಾಲರು, 7259675543**

ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತೀಯ ಇತಿಹಾಸದಲ್ಲಿ ಸಮಾನತೆ, ನ್ಯಾಯ ಮತ್ತು ಜ್ಞಾನಕ್ಕೆ ಪ್ರತೀಕವಾಗಿದ್ದಾರೆ.1891ರ ಏಪ್ರಿಲ್ 14ರಂದು ಮಹಾರಾಷ್ಟ್ರದ ಮೌನಲ್ಲಿ ಜನಿಸಿದ ಅವರು, ಬಾಲ್ಯದಲ್ಲಿಯೇ ಅಸ್ಪೃಶ್ಯತೆ ಮತ್ತು ಸಾಮಾಜಿಕ ಅನ್ಯಾಯವನ್ನು ಅನುಭವಿಸಿದರು.ಶಾಲೆಯಲ್ಲಿ ಇತರ ಮಕ್ಕಳೊಂದಿಗೆ ಕುಳಿತುಕೊಳ್ಳಲು ಅವಕಾಶವಿಲ್ಲದೆ,ಕುಡಿಯುವ ನೀರಿಗೂ ನಿರಾಕರಣೆ ಎದುರಿಸಬೇಕಾಯಿತು.ಆದರೆ ಈ ಕಷ್ಟಗಳು ಅವರನ್ನು ಕುಗ್ಗಿಸಲಿಲ್ಲ;ಬದಲಿಗೆ ಹೋರಾಟದ ದಿಕ್ಕಿನಲ್ಲಿ ಮುಂದುವರೆಯಲು ಪ್ರೇರೇಪಿಸಿದವು.ಅಂಬೇಡ್ಕರ್ ಅವರಿಗೆ ಶಿಕ್ಷಣವೇ ಮುಕ್ತಿಯ ಮಾರ್ಗ ಎಂಬ ನಂಬಿಕೆ ಇತ್ತು. ಆರ್ಥಿಕ ಸಂಕಷ್ಟಗಳ ನಡುವೆಯೂ ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದು,ನಂತರ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಇಂಗ್ಲೆಂಡ್‌ನ ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಉನ್ನತ ಶಿಕ್ಷಣ ಪಡೆದರು. ಅವರ ಜ್ಞಾನವು ಸಮಾಜ ಪರಿವರ್ತನೆಗೆ ಬಲವಾದ ಆಧಾರವಾಯಿತು.''ಶಿಕ್ಷಣ ಪಡೆಯಿರಿ,ಸಂಘಟಿತರಾಗಿ, ಹೋರಾಡಿ''ಎಂಬ ಅವರ ಸಂದೇಶವು ಲಕ್ಷಾಂತರ ಜನರಿಗೆ ಸ್ಫೂರ್ತಿಯಾಯಿತು. ಅಸ್ಪೃಶ್ಯತೆ ವಿರುದ್ಧ ನಡೆಸಿದ ಚಳವಳಿಗಳು ಸಮಾಜದಲ್ಲಿ ಮಹತ್ವದ ಬದಲಾವಣೆ ತಂದವು ಮತ್ತು ದಲಿತರಲ್ಲಿ ಆತ್ಮಗೌರವವನ್ನು ಬೆಳೆಸಿತು.ಭಾರತದ ಸಂವಿಧಾನದ ಮುಖ್ಯ ಶಿಲ್ಪಿಯಾಗಿ ಅವರು ಸಮಾನತೆ,ಸ್ವಾತಂತ್ರ್ಯ ಮತ್ತು ನ್ಯಾಯದ ಮೌಲ್ಯಗಳನ್ನು ಸ್ಥಾಪಿಸಿದರು.ಮೊದಲ ಕಾನೂನು ಸಚಿವರಾಗಿ ಮಹಿಳೆಯರ ಹಕ್ಕುಗಳು ಮತ್ತು ಶಿಕ್ಷಣದ ಅಭಿವೃದ್ಧಿಗೆ ಒತ್ತು ನೀಡಿದರು.ಅಂಬೇಡ್ಕರ್ ಜಯಂತಿ ನಮಗೆ ಅವರ ಆದರ್ಶಗಳನ್ನು ನೆನಪಿಸುತ್ತದೆ. ಸಮಾನತೆ ಮತ್ತು ಮಾನವೀಯತೆಯನ್ನು ಕಾಪಾಡುವ ಸಂಕಲ್ಪ ಮಾಡುವ ದಿನವಾಗಿದೆ.ಅವರ ಜೀವನವು ನಮ್ಮೆಲ್ಲರಿಗೂ ಪ್ರೇರಣೆಯಾಗಿ,ನ್ಯಾಯಯುತ ಸಮಾಜ ನಿರ್ಮಾಣಕ್ಕೆ ದಾರಿ ತೋರಿಸುತ್ತದೆ.

## ಸುಳ್ಳು ಪ್ರಕರಣದಲ್ಲಿ ಕೆ.ಆರ್.ಎಸ್. ನಾಯಕರ ಬಂಧನ : ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸುವಂತ ಘಟನೆ ಒಂದರಲ್ಲಿ, ಕೆ.ಆರ್.ಎಸ್. ಪಕ್ಷದ ಉಪಾಧ್ಯಕ್ಷರಾದ ಸೋಮಸುಂದರ್ ಅವರನ್ನು ಸುಳ್ಳು ಪ್ರಕರಣ ದಾಖಲಿಸಿ ಬಂಧಿಸಿರುವುದು ಹಾಗೂ ರಾಜ್ಯ ಉಪಾಧ್ಯಕ್ಷರಾದ ಜ್ಞಾನ ಸಿಂಧು ಸ್ವಾಮಿ ಮತ್ತು ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ್ ಭಟ್ಟರಹಳ್ಳಿ ಅವರ ಮೇಲೂ ಸುಳ್ಳು ಪ್ರಕರಣಗಳನ್ನು ದಾಖಲಿಸಿರುವುದಾಗಿ ಪಕ್ಷದ ಮುಖಂಡರು ಖಂಡಿಸಿ ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟು ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.


ಇದೆ ವೇಳೆ ಕೆ.ಆರ್.ಎಸ್. ಪಕ್ಷದ ಜಿಲ್ಲಾಧ್ಯಕ್ಷ ಉಮೇಶ್ ಬೆಳಗುಂಬ ಮಾಧ್ಯಮದೊಂದಿಗೆ ಮಾತನಾಡಿ, ತಮ್ಮ ಪಕ್ಷದ ಪದಾಧಿಕಾರಿಗಳು ಸರ್ಕಾರದ ವಿರುದ್ಧ ಅಹವಾಲು ಸಲ್ಲಿಸಲು ಹೋದ ಸಂದರ್ಭದಲ್ಲಿ ಅವರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ ಕ್ರಮವಾಗಿದ್ದು, ಇದು ಆಡಳಿತದ ದೌರ್ಜನ್ಯವನ್ನು ತೋರಿಸುತ್ತದೆ ಎಂದು ದೂರಿದರು. ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊಂದಿರುವ ಸಂದರ್ಭದಲ್ಲಿ, ನ್ಯಾಯಕ್ಕಾಗಿ ಬಂದವರನ್ನೇ ಬಂಧಿಸಿ ಪ್ರಕರಣ ದಾಖಲಿಸಿರುವುದು ಸರಿಯೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಕಾನೂನು ಜಾರಿಗೊಳಿಸಬೇಕಾದವರು ತಾವೇ ಕಾನೂನಿನ ದುರುಪಯೋಗ ಮಾಡುತ್ತಿದ್ದರೆ, ಸಾಮಾನ್ಯ ಜನರಿಗೆ ಯಾವ ರೀತಿಯ ಸಂದೇಶ ನೀಡಲಾಗುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ, ಈ ಘಟನೆಗಳಿಂದ ಯಾರಾದರೂ ಯಾರ ಮೇಲಾದರೂ ಸುಳ್ಳು ದೂರುಗಳನ್ನು ನೀಡಿ ಪ್ರಕರಣ ದಾಖಲಿಸಬಹುದೆಂಬ ಭೀತಿ ಸಾರ್ವಜನಿಕರಲ್ಲಿ ಉಂಟಾಗಿದೆ. ಇದರಿಂದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ಉಂಟಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

# ಬಾಬಾಸಾಹೇಬರ ಮಹದಾಸೆಯನ್ನು ಮರೆತು ಬದುಕುತ್ತಿರುವ ಬಹುಜನರು

**ಮಧು**

ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಉನ್ನತಿಯ ಬಗ್ಗೆ ಮಾತ್ರ ಅಗಾಧ ಕನಸುಗಳನ್ನು ಕಟ್ಟಿಕೊಳ್ಳುತ್ತಾನೆ ಅಥವಾ ಹೆಚ್ಚೆಂದರೆ ತನ್ನ ಕುಟುಂಬದ ಬಗ್ಗೆ ಕನಸುಗಳನ್ನು ಕಟ್ಟಿಕೊಳ್ಳುತ್ತಾನೆ. ಅವುಗಳನ್ನು ನನಸಾಗಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಕನಸುಗಳು ನನಸಾದರೆ ಸುಖಿಯಾಗಿ ಬದುಕುತ್ತಾನೆ. ಇಲ್ಲದಿದ್ದರೆ ಅಷ್ಟಕ್ಕೆ ತೃಪ್ತಿ ಹೊಂದಿ ಸಾಯುತ್ತಾನೆ. ಆದರೆ ಒಬ್ಬ ಅಸಮಾನ್ಯ ವ್ಯಕ್ತಿ ಕನಸುಗಳನ್ನು ಕಟ್ಟುವುದಿಲ್ಲ, ಕನಸುಗಳನ್ನು ಬಿತ್ತುತ್ತಾನೆ. ತನ್ನಂತೆಯೇ ಇಡೀ ಸಮಾಜ ಅತ್ಯುನ್ನತ ಬದುಕು ನಡೆಸಬೇಕೆಂದು ಆಲೋಚಿಸುತ್ತಾನೆ. ಅದನ್ನು ಸಾಧಿಸುವ ಮಾರ್ಗವನ್ನು ಹುಡುಕುತ್ತಾನೆ. ಆ ಮಾರ್ಗದಲ್ಲಿ ನಡೆಯಬಲ್ಲ ಪ್ರೇರಣೆಯನ್ನ ನೀಡಿ ಹುರಿದುಂಬಿಸುತ್ತಾನೆ. ತನ್ನ ಸಮಾಜದ ಏಳಿಗೆಯೇ ತನ್ನ ಕನಸು ಎಂದು ಎಲ್ಲರ ಎದೆಯೊಳಗೆ ಬಿತ್ತುತ್ತಾನೆ. ಅಂತಹ ಅಸಮಾನ್ಯ ವ್ಯಕ್ತಿ ಬೇರಾರೂ ಕೂಡ ಅಲ್ಲ ಅವರೇ ಬಹುಸಂಖ್ಯಾತ ಶೋಷಿತ ಸಮುದಾಯದ ಮಹಾಚೇತನ, ಬಹುಜನರ ಏಳಿಗೆಗಾಗಿಯೇ ತನ್ನಿಡೀ ಬದುಕನ್ನು ಮುಡುಪಿಟ್ಟ ಮಹಾನ್ ಮಾನವತಾವಾದಿ ನೊಂದವರ ಆಶಾಕಿರಣ ಬಾಬಾಸಾಹೇಬ್ ಅಂಬೇಡ್ಕರ್.

ಹೋಗಿ, ಈ ಸ್ವತಂತ್ರ ಭಾರತವನ್ನು ಆಳುವ ದೊರೆಗಳು ನಾವೇ ಎಂದು, ಇಂದೇ ನಿಮ್ಮ ಮನೆ ಗೋಡೆಗಳ ಮೇಲೆ ಬರೆದಿಟ್ಟುಕೊಳ್ಳಿ ಎಂದು ಬಹುಸಂಖ್ಯಾತ ಬಹುಜನರಿಗೆ ಅಂದರೆ ಎಸ್.ಸಿ, ಎಸ್.ಟಿ, ಮತ್ತು ಓ.ಬಿ.ಸಿ ಶೋಷಿತ ಸಮುದಾಯಗಳಿಗೆ ಬಾಬಾ ಸಾಹೇಬರು ನೀಡಿದ ಅಮೂಲ್ಯವಾದ ಸಂದೇಶ. ನನ್ನ ಜನ ಈ ದೇಶವನ್ನು ಆಳುವುದೇ ನನ್ನ ಆಮಹದಾಸೆಟಿ ಎಂದು ಜೀವನ ಪರ್ಯಂತ ಇದಕ್ಕಾಗಿ ಪರಿತಪಿಸಿದ ಅಂಬೇಡ್ಕರ್ ಅಂತಹ ಮತ್ತೊಬ್ಬ ವ್ಯಕ್ತಿಯನ್ನು ನೋಡಿರಲು ಸಾಧ್ಯವೇ ಇಲ್ಲ. ಇದು ಅವರ ಮಹದಾಸೆಯಾಗಿತ್ತು ಎಂಬುದನ್ನು ಬಾಬಾ ಸಾಹೇಬರ ಆಪ್ತ ಕಾರ್ಯದರ್ಶಿ ನಾನಕ್ ಚಂದ್ ರತ್ತು





ರವರು ಬರೆದಿರುವ ಆಲಾಸ್ಟ್ ಫೀವ್ ಈಯರ್ಸ್ ಆಫ್ ಡಾ. ಅಂಬೇಡ್ಕರ್ ಪುಸ್ತದಲ್ಲಿ ದಾಖಲಿಸಿರುವ ಅಂಶಗಳಿಂದ ತಿಳಿಯಬಹುದಾಗಿದೆ.

ಅಂದು ಜುಲೈ 31, 1956ರ ಮುಸ್ಸಂಜೆ. ಬಾಬಾ ಸಾಹೇಬರ ಕೋಣೆ ಅಪರೂಪಕ್ಕೆ ಕತ್ತಲಾಗಿತ್ತು. ಬಾಬಾ ಸಾಹೇಬರು ಕೋಣೆಯಲ್ಲಿದ್ದ ಯಾವ ರಾತ್ರಿಯೂ ಬೆಳಕು ಆರುತ್ತಿರಲಿಲ್ಲ. ಅವರು ನಿರಂತರ ಅಭ್ಯಾಸದಲ್ಲಿರುತ್ತಿದ್ದರು. ಆದರೆ ಆ ರಾತ್ರಿ ಮಾತ್ರ ಬಾಬಾಸಾಹೇಬರು ಕೋಣೆಯಲ್ಲಿದ್ದರೂ ಕತ್ತಲಾಗಿತ್ತು. ನಾನಕ್ ಚಂದ್ ರತ್ತುರವರಿಗೆ ಮಹದಾಶ್ಚರ್ಯವಾಯಿತು. ಜೊತೆಗೆ ಏನೋ ಭಯ, ಆತಂಕ ತಳಮಳದಿಂದ ಬಾಬಾ ಸಾಹೇಬರ ಕೋಣೆಗೆ ಹೋಗಿ ಬೆಳಕು ಹೊತ್ತಿಸುತ್ತಾರೆ. ಒಂದು ಕ್ಷಣ ಗರಬಡಿದವರಂತೆ ನಿಂತುಬಿಡುತ್ತಾರೆ ರತ್ತು. ಬಾಬಾಸಾಹೇಬರು ಸೋಫಾದಲ್ಲಿ ಕುಳಿತಿದ್ದಾರೆ ಕಣ್ಣಳನ್ನು ಮುಚಿಚ್ದ್ದಾರೆ ಆದರೆ ಕಂಗಳಿಂದ ಧಾರಕಾರವಾಗಿ ನೀರು ಸುರಿಯುತ್ತದೆ. ತನ್ನ ಜನಗಳು ತನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲವೆಂತಲೊ. ತನ್ನ ಜನ ಈ ದೇಶ ಆಳುವುದನ್ನು ಕಣ್ಣಾರೆ ನೋಡಲು ಸಾಧ್ಯವಾಗುತ್ತಿಲ್ಲವೆಂತಲೊ. ತನ್ನ ಹೋರಾಟವನ್ನು ಗುರಿ ಮುಟ್ಟಿಸಲು ಆರೋಗ್ಯ ಸಹಕರಿಸುತ್ತಿಲ್ಲವೆಂತಲೊ. ತನ್ನ ಹೋರಾಟವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ತನ್ನ ನಂತರ ಸಮರ್ಥವಾಗಿ ಮುನ್ನೆಡೆಸುವವರು ಯಾರೂ ಸೃಷ್ಟಿಯಾಗುತ್ತಿಲ್ಲವೆಂತಲೊ.. ತನ್ನ ಹೋರಾಟದ ಫಲ ಅನುಭವಿಸುತ್ತಿರುವವರು ತಮ್ಮ ಸಮುದಾಯ ತೊರೆದು ಸ್ವಾರ್ಥಿಗಳಾದರು ಅಂತಲೊ.. ತನ್ನ ಪರಿಶ್ರಮದಿಂದ ಸೃಷ್ಟಿಯಾದ ರಾಜಕಾರಣಿಗಳು ಚಮಚಗಳಾಗಿ ತನ್ನ ಜನರ ಹಿತವನ್ನು ಕಡೆಗಣಿಸಿದರೂ ಎಂತಲೊ.. ಅಥವಾಎಲ್ಲದರ ಸಮ್ಮಿಶ್ರಿತ ನೋವಿನಲ್ಲೋ ಮೌನವಾಗಿ ರೋಧಿಸುತ್ತಿದ್ದರು. ಇಡಿ ಹಿಮಾಲಯವೇ ಕರಗಿ ಜಾರುತ್ತಿರುವಂತೆ ಭಾಸವಾಗುತ್ತದೆ ರತ್ತುರವರಿಗೆ. ಗಾಂಧಿ ಕಾಂಗ್ರೆಸ್ ಗೂಂಡಾಗಳ ಗುಂಡಿಗೆಗಳನ್ನೇ ನಡುಗಿಸಿದ್ದ ಈ ಹಿಮಾಲಯದ ಕಣ್ಣಳಲ್ಲಿ ನೀರೆ? ಬ್ರಿಟೀಷರ ತುಟಿ ಪಿಟಿಕ್ ಎನ್ನದಂತೆ ಪ್ರಬುದ್ಧವಾಗಿ ಪ್ರಬಂಧ ಮಂಡಿಸುತ್ತಿದ್ದ ಮಹಾಜ್ಞಾನಿ ರೋಧಿಸುತ್ತಿರುವರೆಯೇ? ಯಾವುದೂ ರತ್ತುರವರ ಊಹೆಗೆ ಸಿಲುಕುತ್ತಿಲ್ಲ. ಕೇಳುವ ಧೈರ್ಯವೂ ಬರಲಿಲ್ಲ. ಕೇಳದೆ ಮನಸ್ಸು ನಿಲ್ಲುತ್ತಿಲ್ಲ. ಹೆಜ್ಜೆ ಸಪ್ಪಳಕ್ಕೆ ಎಚ್ಚೆತ್ತ ಸಾಹೇಬರು ಮೆಲ್ಲಗೆ ಕಣ್ತೆರೆಯುತ್ತಾರೆ. ಎದುರಿಗಿದ್ದ ರತ್ತು ಅವರನ್ನು ಕಂಡ ಸಾಹೇಬರು ಅವರ ಭಾವವನ್ನು ಅರ್ಥೈಸಿಕೊಂಡು ಗದ್ಗದಿತರಾಗಿ ಮುಗ್ದ ಮಗುವಿನಂತೆ ಕಂಪಿಸುವ ಧ್ವನಿಯಲ್ಲಿ ಕೇಳುತ್ತಾರೆ. ಆನಾನ್ಯಾಕೆ ಕಣ್ಣೀರುಡುತ್ತಿದ್ದೇನೆ ಅಂತ ಯೋಚಿಸುತ್ತಿದ್ದೀಯಾ ರತ್ತು. ನಿಮಗ್ಯಾರಿಗೂ ನನ್ನ ನೋವು ದುಖ ಅಂತರಾಳ ಅರ್ಥವಾಗುವುದಿಲ್ಲ. ನನ್ನ ಚಳವಳಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ ಎನ್ನುವ ನಿರಾಸೆ ನನ್ನನ್ನು ಕಾಡುತ್ತಿದೆ. ನಾನು ಬದುಕಿರುವಾಗಲೇ ನನ್ನ ಜನ ಆಳುವ ವರ್ಗವಾಗುವುದನ್ನು ಕಣ್ಣಾರೆ ಕಾಣಬೇಕೆಂದಿದ್ದೆ. ನನ್ನ ಜನರು ಎಲ್ಲರಂತೆ ರಾಜಕೀಯ ಹಕ್ಕು ಅಧಿಕಾರಗಳನ್ನು ಗಳಿಸಿಕೊಂಡು ಸರಿಸಮನಾಗಿ ಬದುಕುವುದನ್ನು ನೋಡಬೇಕೆಂದುಕೊಂಡಿದ್ದೆ. ಅದು ಸಾಧ್ಯವಾಗದೇನೋ.. ನಾನಂತು ತುಂಬಾ ಬಳಲಿದ್ದೇನೆ. ಒಂದು ಕಡೆ ಖಾಯಿಲೆ ನನ್ನನ್ನು ನಿಶ್ಯಕ್ತಗೊಳಿಸಿದೆ. ನನ್ನ ಪರಿಶ್ರಮದ ಫಲವನ್ನು ಕೆಲವೇ ಮಂದಿ ವಿದ್ಯಾವಂತರು ಮಾತ್ರ ಅನುಭವಿಸುತ್ತಿದ್ದಾರೆ. ಫಲಾನುಭವಿಗಳಾದ ವಿದ್ಯಾವಂತ ವರ್ಗ ಸ್ವಾರ್ಥಿಗಳಾಗಿ ಸಮುದಾಯವನ್ನು ಕಡೆಗಣಿಸಿ ನಾಲಾಯಕ್ಕಳೆಂದು ತೋರಿಸುತ್ತಿದ್ದಾರೆ. ಇವರು ನನ್ನ ಕನಸುಗಳನ್ನು ಕೊಂದರು. ಒಬ್ಬರಿಗೂ ಸಮುದಾಯದ ಸೇವೆ ಮಾಡುವ ಇಚ್ಛೆಯಿಲ್ಲ. ಅದಿಕಾರದ ಮದದಿಂದ ತಮ್ಮದೆ ಸಮುದಾಯವನ್ನು ಕಡೆಗಣಿಸುತ್ತಾ ತಮ್ಮ ನಾಶಕ್ಕೆ ತಾವೇ ಮುನ್ನುಡಿ ಬರೆದುಕೊಳ್ಳುತ್ತಿದ್ದಾರೆ. ನಾನು ತಪ್ಪು ಮಾಡಿದೆ ನನ್ನ ಅನಕ್ಷರಸ್ಥ ಹಳ್ಳಿಗರತ್ತ ನಾನು ಗಮನ ಕೊಡಬೇಕಿತ್ತು. ಈಗಲೂ ಅನಕ್ಷರಸ್ಥ, ಅಮಾಯಕ ಹಳ್ಳಿಗರನ್ನು ಎಲ್ಲರ ಸಮಾನಕ್ಕೆ ತರಬೇಕೆಂಬ ಆಸೆ... ಆದರೆ ನನ್ನ ಕಾಯಿಲೆ ನನ್ನ ದಾರಿಗಳಿಗೆ ಅಡ್ಡಿಯಾಗಿತ್ತಿದೆ. ನನ್ನ ನಂತರ ನನ್ನ ಜನರ ಬದುಕು ಯಥಾಸ್ಥಿತಿಯಲ್ಲೇ ಉಳಿದುಬಿಡುತ್ತದೆ. ನನ್ನ ಅನುಯಾಯಿಗಳು ನನ್ನ ಜನರನ್ನು ಕಾಪಾಡುತ್ತಾರೆಂದ. ನನ್ನ ಚಳುವಳಿಯನ್ನು ಮುನ್ನೆಡೆಸುತ್ತಾರೆಂದು ಬಹಳ ನಿರೀಕ್ಷೆಯಿಟ್ಟಿದ್ದೆ. ಆದರೆ ಅವರುಗಳೇ ಕೇವಲ ನಾಯಕತ್ವಕ್ಕಾಗಿ ಕಿತ್ತಾಡುತ್ತಿದ್ದಾರೆ. ಅವರ ಮೇಲೆ ಇನ್ನೂ ಹೇಗೆ ನಂಬಿಕೆ ಇಡಲು ಸಾಧ್ಯ. ಹೇಗೋ ವಿಪರೀತ ಅಡೆತಡೆಗಳ ನಡುವೆಯೂ, ಅಪನಿಂದನೆಗಳೆಲ್ಲವನ್ನೂ ಸಹಿಸಿಕೊಂಡು, ನನ್ನ ಶಕ್ತಿಮೀರಿ ನಾನು ನನ್ನ ಜನಗಳಲ್ಲಿ ಸಾಕಷ್ಟು ಪರಿವರ್ತನೆ ತಂದಿದ್ದೇನೆ. ಸಾಯುವ ಕ್ಷನದ ತನಕವೂ ನಾನು ನನ್ನ ಜನರಿಗಾಗಿಯೇ ದುಡಿಯುತ್ತೇನೆ.

ನಾನಕ್ ಚಂದ್, ನನ್ನ ಜನಗಳಿಗೆ ಹೇಳು ನಾನು ಏನೆಲ್ಲಾ ಸಾಧಿಸಿದೆನೋ ಅದೆಲ್ಲವೂ ನನ್ನ ಸತತ ಪ್ರಯತ್ನದಿಂದ, ಗಟ್ಟಿ ನಂಬಿಕೆಯಿಂದ ಶುದ್ಧ ಮನಸ್ಸಿನಿಂದ ಸಾಧಿಸಿದ್ದೇನೆ. ವಿಪರೀತ ವಿರೋಧಗಳು ಲೆಕ್ಕವಿಲ್ಲದಷ್ಟು ಅಡ್ಡಿ ಆತಂಕಗಳು ವಿರೋಧಿಗಳ ನಿಂದನೆಗಳೆಲ್ಲವನ್ನೂ ಸಹಿಸಿ, ಎದುರಿಸಿ ಅಪಾರ ಆತ್ಮ ವಿಶ್ವಾಸದಿಂದ ನಾನಿದನ್ನೆಲ್ಲಾ ಸಾಧಿಸಿದ್ದೇನೆ ಅನ್ನುವುದನ್ನು ನನ್ನ ಜನಗಳಿಗೆ ಮನವರಿಕೆ ಮಾಡಿ ಕೊಡು. ಇಷ್ಟೆಲ್ಲಾ ಕಷ್ಟಕಾರ್ಪಣ್ಯಗಳನ್ನು ಎದುರಿಸಿ ನಾನು ಈ ವಿಮೋಚನಾ



ರಥವನ್ನು ಇಲ್ಲಯವರೆಗೆ ಏಕಾಂಗಿಯಾಗಿ ಎಳೆದು ತಂದಿದ್ದೇನೆ. ಮುಂದೆಯೂ ಅದು ಎಲ್ಲವನ್ನೂ ಮೀರಿ ಚಲಿಸಲಿ. ನನ್ನ ಜನಗಳಿಗೆ, ಅನುಯಾಯಿಗಳಿಗೆ ಅದನ್ನು ಗುರಿಮುಟ್ಟಿಸುವ ಜವಾಬ್ದಾರಿ ಹೊರಿಸುತ್ತಿದ್ದೇನೆ. ಅವರಲ್ಲಿ ಅಪಾರ ಆತ್ಮವಿಶ್ವಾಸ, ಶಕ್ತಿ, ಗಟ್ಟಿಯಾದ ನಂಬಿಕೆ ಮತ್ತು ತ್ಯಾಗ ಮಾಡುವ ಮನಸ್ಸಿದ್ದರೆ ಅದನ್ನು ಮುಂದುವರೆಸಲಿ. ಸಾಧ್ಯವಾಗದಿದ್ದರೆ, ನನ್ನ ಚಳುವಳಿಅಂತಹ ತ್ಯಾಗಿಗಳು ಸೃಷ್ಟಯಾಗುವ ತನಕ ನಿಂತಲ್ಲೆ ನಿಂತಿರಲಿ. ಆದರೆ ಯಾವುದೇ ಕಾರಣಕ್ಕೂ ವಿಮೋಚನಾ ರಥವನ್ನು ಹಿಂದಕ್ಕೆ ತಳ್ಳಬೇಡಿ ಎಂದು ತಿಳಿಸು ನಾನಕ್ ಚಂದ್.

ಇದೆಲ್ಲವನ್ನು ಸಾಧಿಸುವುದಕ್ಕೆ ರಾಜಕೀಯ ಶಕ್ತಿಯೊಂದೇ ರಾಜಮಾರ್ಗ ಸ್ವತಂತ್ರ, ರಾಜಕೀಯ ಅಧಿಕಾರದಿಂದ ಮಾತ್ರ ನನ್ನ ಜನ ಸರ್ವರೀತಿಯಲ್ಲೂ ಸಮಾನತೆ ಸಾಧಿಸಬಹುದು. ಎಲ್ಲರ ಸರಸಮಕ್ಕೆ ನಿಲ್ಲಬಲ್ಲರು. ಅದನ್ನು ಸಾಧಿಸಬಲ್ಲ ಶಕ್ತಿ, ಸಾಮರ್ಥ್ಯ ಎಲ್ಲವೂ ನಿಮಗೆ ರಕ್ತಗತವಾಗಿ ಬಂದಿದೆ, ಅಂತ ನನ್ನ ಜನಗಳಿಗೆ ಸಾರಿ ಸಾರಿ ಹೇಳು ನಾನಕ್ ಚಂದ್... ಹೋಗು ನಾನು ಹೇಳಿದೆ ಅಂತ ನನ್ನ ಜನಗಳಿಗೆ ಹೇಳು. ನನ್ನ ಜನ ರಾಜ್ಯಾಧಿಕಾರ ಹಿಡಿದು ಈ ದೇಶವನ್ನು ಆಳಬೇಕು ಅನ್ನುವುದನ್ನು ಮರೆಯದೆ ಮನವರಿಕೆ ಮಾಡಿ ಹೇಳು. ಇಷ್ಟು ಹೇಳಿದ ಬಾಬಾ ಸಾಹೇಬರು ವಿಪರೀತ ಗದ್ಗದಿತರಾದರು. ಅವರು ನನ್ನ ಜನ, ರಾಜ್ಯಾಧಿಕಾರ, ವಿಮೋಚನಾ ರಥ ಎನ್ನತ್ತಲೇ ಕನವರಿಸುತ್ತಿದ್ದರು. ನನಗೆ ಅದು ಅತ್ಯಂತ ಕರುಳು ಹಿಂಡುವ ದೃಶ್ಯವಾಗಿತ್ತು ಎಂದು ನಾನಕ್ ಚಂದ್ ರತ್ತು ಬರೆದುಕೊಂಡಿದ್ದಾರೆ.

ಇಷ್ಟೆಲ್ಲಾ ಮಹದಾಸೆ ಇಟ್ಟುಕೊಂಡ ಮಹಾನ್ ವ್ಯಕ್ತಿಯ ಕೊಡುಗೆ ಅವರ ತ್ಯಾಗಕ್ಕೂ ಬೆಲೆ ಕೊಡದಂತಹ ನಾವುಗಳು ಎಂಥಹ ಸ್ವಾರ್ಥಿಗಳು ಅಲ್ಲವೇ ರಾಜರಾಗಬಲ್ಲ ಎಲ್ಲಾ ಅವಕಾಶಗಳನ್ನು ಪರರಿಗೆ ಅಡವಿಟ್ಟು ಕೈಲಾಗದವರಾಗಿ, ಚಮಚಾಗಳಾಗಿ, ಬೇಜವಬ್ದಾರಿಗಳಾಗಿ ಬದುಕುತ್ತಿದ್ದೇವಲ್ಲ. ಶೂರರಂತೆ, ವೀರರಂತೆ, ಸ್ವಾಭಿಮಾನಿಗಳಂತೆ ಬದುಕಬೇಕಾದವರು ಆ ಮಹಾನ್ ವ್ಯಕ್ತಿ ಬಿತ್ತಿದ ಕನಸ್ಸನ್ನು ಚಿಗುರುವ ಮುನ್ನವೇ ಚಿವುಟುವ ಕಾರ್ಯ ಮಾಡುತ್ತಿರುವುದಾದರೂ ಸರಿಯೇ? ನಿಮ್ಮನ್ನು ನೀವು ಪ್ರಶ್ನಿಸಿಕೊಳ್ಳಿ. ಅವರ ಕನಸನ್ನು ನನಸು ಮಾಡುವ ಹಾದಿಯಲ್ಲಿ ಸಾಗಿದ್ದರೆ ಮಹಾನ್ ವ್ಯಕ್ತಿ ಕಂಡ ಕನಸು ನನಸಾಗುತ್ತಿತ್ತು. ಆದರೀಗ ಆ ವ್ಯಕ್ತಿ ತನ್ನ ಆಪ್ತ ಕಾರ್ಯದರ್ಶಿ ಮುಂದೆ ಕಣ್ಣೀರು ಹಾಕಿಕೊಂಡು ಹೇಳಿಕೊಂಡ ಋಣಾತ್ಮಕ ಅಂಶವೆಲ್ಲವು ಸತ್ಯದಂತೆ ಕಾಣುತ್ತಿದೆ. ಇದು ಸರಿಯಲ್ಲ. ಇನ್ನಾದರೂ ಆ ಮಹಾನ್ ವ್ಯಕ್ತಿಯ ನಿಸ್ವಾರ್ಥ ಹೋರಾಟಕ್ಕೆ ಗೌರವ, ಬೆಲೆ ತಂದುಕೊಡುವಂತಹ ಘನತೆವೆತ್ತ ಸ್ವಾಭಿಮಾನದ ಬದುಕು ಬದುಕೋಣ ಅವರ ಆಶಯದ ದಾರಿಯಲ್ಲಿ ಸಾಗೋಣ, ಸರ್ವ ಕಾಲಕ್ಕೂ ಸರ್ವರಿಗೂ ಆದರ್ಶನೀಯರಾದ ಅವರನ್ನು ಮತ್ತು ಅವರ ಹೋರಾಟವನ್ನು ಗೌರವಿಸುವ ಮತು ಅವರ ಆದರ್ಶಗಳನ್ನು ಪಾಲಿಸೋಣ.

# ನಕಾರಾತ್ಮಕ ಭಾವನೆಗಳನ್ನು ದೃಢ ಮನಸ್ಸಿನಿಂದ ಒದ್ದು ಓಡಿಸಿ

**- ಎನ್.ಆರ್.ಪ್ರಶಾಂತ್, ಆಪ್ತ ಸಲಹಾ ಮನಃಶಾಸ್ತ್ರಜ್ಞ ಮೊ.ನಂ. 9481545719**

ಪ್ರಸಿದ್ಧ ಫ್ರೆಂಚ್ ತತ್ವಜ್ಞಾನಿ ಬ್ಲೇಸ್ ಪಾಸ್ಕಲ್ ಅವರಿಗೆ ಯಾರೋ ಒಬ್ಬರು ಹೇಳಿದರಂತೆ, ನನಗೆ ನಿಮ್ಮಂತೆ ಮೆದುಳು ಇದ್ದಿದ್ದರೆ ನಾನು ಇನ್ನೂ ಉತ್ತಮ ವ್ಯಕ್ತಿಯಾಗುತ್ತಿದ್ದೆ ಎಂದು. ಅದಕ್ಕೆ ಪಾಸ್ಕಲ್‌ರವರು ನೀಡಿದ ಉತ್ತರ ಬಹಳ ಮನೋಜ್ಞವಾಗಿದೆ. ಮೊದಲು ಉತ್ತಮ ವ್ಯಕ್ತಿಯಾಗು ನಿನಗೂ ನನ್ನಂತಹ ಮೆದುಳು ಬರುತ್ತದೆ ಎಂದು. ಉತ್ತಮ ಮೆದುಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದರೆ ನಾವೂ ಉತ್ತಮ ವ್ಯಕ್ತಿಗಳಾಗಬೇಕೆಂಬುದು ಸತ್ಯ. ನಮ್ಮಲ್ಲಿ ಪ್ರಾಮಾಣಿಕತೆ, ಶೀಲಸಂಪನ್ನತೆ, ಧನಾತ್ಮಕ ಮನೋಭಾವ ಇರಬೇಕು. ಇವೆಲ್ಲಕ್ಕೂ ಮೂಲ ಮಾನಸಿಕ ದೃಢತೆ.

ಸಮಯ ಯಾರಿಗೂ ಕಾಯುವುದಿಲ್ಲ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಬೇಕಾಗಿರುವುದು ಮಾನಸಿಕ ದೃಢತೆ. ದೈಹಿಕವಾಗಿ ಸದೃಢಗೊಳ್ಳಲು ದಿನನಿತ್ಯ ವಾಕಿಂಗ್, ಜಾಗಿಂಗ್, ಜಿಮ್ ಹೀಗೆ ಏನೇನೊ ಮಾಡುತ್ತೇವೆ. ಆದರೆ ಮಾನಸಿಕ ದೃಢತೆಗೆ ಗಮನ ಕೊಡುವುದೇ ಇಲ್ಲ. ಕೆಲವು ಪ್ರಾಣಿಗಳು ತಮಗಿಂತ ಬಲಿಷ್ಟವಾದ ಪ್ರಾಣಿಗಳನ್ನು ಗೆದ್ದು ಪ್ರಬಲವಾಗಿ ಕಾಣುತ್ತವೆ. ಆದರೆ ನಾವು ನಿಜವಾಗಿಯೂ ಬಲಹೀನರು, ಏಕೆಂದರೆ ಒಂದು ಬಾರಿ ಯಾವುದಾದರು ಬಲಹೀನತೆಗೆ ಬಲಿಯಾಗಿ ಬಿಟ್ಟರೆ ಅದರಿಂದಾಚೆ ಬರಲು ಕಷ್ಟಪಡುತ್ತೇವೆ. ಇಂತಹ ಬಲಹೀನತೆಯ ಆಳದಿಂದ ಹೊರಬರಲು ಬಹಳ ಸಮಯವಾಗುತ್ತದೆ.

**ಮಾನಸಿಕ ಪಕ್ವತೆಯ ಸಂಕೇತವೇ ಮಾನಸಿಕ ದೃಢತೆ**

ದೃಢತೆ ಎಂದರೆ ಅತ್ಯುತ್ತಮ ಸಾಧನೆಗೆ ನಮ್ಮನ್ನು ಅಣಿಗೊಳಿಸುವ ಸಿದ್ಧತೆ. ಸಿದ್ಧತೆಯಿಂದ ದೃಢತೆ. ಮನಸ್ಸು ಪಕ್ವವಾದಾಗ ದೃಢತೆ ಬೆಳೆಯುತ್ತದೆ. ದೃಢತೆ ಎನ್ನುವುದು ತಪಸ್ಸಿನಂತೆ, ಒಮ್ಮೆಲೆ ಸಾಧಸುವುದಕ್ಕಾಗುವುದಿಲ್ಲ. ಹಣ ಕೊಟ್ಟು ಕೊಳ್ಳುವುಂತಹ ವಸ್ತುವಲ್ಲ. ನಮ್ಮ ಬುದ್ದಿಯನ್ನು ಮನಸ್ಸಿನ ಕೈಗೆ ಕೊಟ್ಟರೆ ದೃಢತೆ ಸಾಧಿಸುವುದು ಕಷ್ಟ. ಅದೇ ಮೆದುಳಿನ ಕೈಗೆ ಕೊಟ್ಟರೆ ದೃಢತೆಯು




ಚಿಗುರೊಡೆಯಲು ಪ್ರಾರಂಭಿಸುತ್ತದೆ. ಅದು ನಮ್ಮ ಬಲ, ನಮಗಿರುವ ಭದ್ರವಾದ ಭಾವ. ನಮ್ಮ ಅನುಭವಗಳ ಆಧಾರದಲ್ಲಿ ಯೋಚಿಸಿ ವಾಸ್ತವಿಕತೆಯನ್ನು ಸೇರಿಸಿದಾಗ ದೃಢತೆಯೆಡೆಗೆ ಸಾಗಲು ಸಾಧ್ಯ.

ತಂದೆ-ತಾಯಿ ಮಾರ್ಗದರ್ಶನದಿಂದ ಮಾನಸಿಕ ದೃಢತೆಯೆನ್ನುವುದು ಬಾಲ್ಯದಿಂದಲೇ ಚಿಗುರೊಡೆಯುತ್ತದೆ. ಹೀಗಾಗಿ ಬಾಲ್ಯದಿಂದಲೇ ತಂದೆ-ತಾಯಿ ಮಕ್ಕಳನ್ನು ಭಯ ಮುಕ್ತ ವಾತಾವರಣದಲ್ಲಿ ಬೆಳೆಸಬೇಕು. ದೆವ್ವ, ಭೂತ, ಪಿಶಾಚಿ ಇತ್ಯಾದಿಗಳ ಕಲ್ಪನೆಗಳು ಮಕ್ಕಳಲ್ಲಿ ಬೆಳೆಯದಂತೆ ನೋಡಿಕೊಳ್ಳಬೇಕು. ಭಯವಿದ್ದರೂ ಅದನ್ನು ಬೇರು ಸಮೇತ ಕಿತ್ತೆಸೆಯಲು ಪ್ರಯತ್ನಿಸಬೇಕು. ಬಲಹೀನತೆ ಪ್ರಾರಂಭವಾಗುವುದೆ ಭಯದಿಂದ. ಹೀಗಾಗಿ ನಿರ್ಭಯದಿಂದ ಬಾಳುವುದನ್ನು ಹೆತ್ತವರು ಕಲಿಸಬೇಕು.

**ಭಯ ಭ್ರಾಂತಿಗೆ ಸಿಲಿಕಿಸುತ್ತದೆ**

ಒಮ್ಮೆ ಮನಸ್ಸು ಬಲಹೀನಗೊಂಡರೆ ಮುಗಿಯಿತು. ದುರ್ಬಲ ಮನಸ್ಸು ಅತಿರೇಕವೆನಿಸುವಷ್ಟು ಭಯಗೊಂಡು ಭ್ರಾಂತಿಗೆ ಸಿಲುಕಿಕೊಳ್ಳುತ್ತದೆ. ವಾಸ್ತವತೆಯ ಅರಿವನ್ನೆ ಕಳೆದುಕೊಂಡುಬಿಡುತ್ತದೆ. ಯಾವುದೆ ವಾಸ್ತವಿಕತೆಗಿಂತ ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯವಾಗಿದೆ. ಏಕೆಂದರೆ ಸಫಲತೆಯನ್ನು ಮತ್ತು ವಿಫಲತೆಯನ್ನು ನಿರ್ಣಯಿಸುವುದು ನಮ್ಮ ಮನೋಭಾವ. ವಾಸ್ತವ ಪ್ರಪಂಚದಿಂದ ದೂರ ನಡೆಯಲು ಪ್ರಾರಂಭಿಸಿದರೆ ಗೆಲುವು ದೂರ ಸರಿಯುತ್ತದೆ. ಆಗ ಪ್ರತಿ ಹೆಜ್ಜೆಯಲ್ಲಿಯೂ ಸೋಲನ್ನೆ ಹೊದ್ದು ಮಲಗಬೇಕಾಗುತ್ತದೆ. ಇದು ಮನುಷ್ಯನನ್ನು ಕಾಡಿ ಜೀವ ಹಿಂಡಿಬಿಡುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ಮಾನಸಿಕ ದೃಢತೆಯನ್ನು ಗಳಿಸಿಕೊಳ್ಳಲು ಹೊರಟರೆ ಬಲಹೀನತೆ ಪದೆ ಪದೆ ಅಡ್ಡಗಾಲು ಹಾಕುತ್ತದೆ. ಹಾಗೆಂದು ಪ್ರಯತ್ನ ಬಿಡುವ ಹಾಗಿಲ್ಲ. ದೇಹಕ್ಕೆ ಉತ್ತಮ ಆಹಾರ ಹೇಗೆ ಬೇಕೋ ಹಾಗೆಯೆ ಮನಸ್ಸಿಗೆ ಉತ್ತಮ ವಿಚಾರಗಳನ್ನು ಉಣಿಸಬೇಕು.

**ಬಲಹೀನತೆಯನ್ನು ಕೊಡವಿ ಎದ್ದು ನಿಲ್ಲಬೇಕು**

ನಮ್ಮ ಶಕ್ತಿ ಏನು, ಬಲಹೀನತೆಗಳೇನು, ನಾವೇನು ಮಾಡಬಾರದು, ಹಾಗೆಯೆ, ಏನು ಮಾಡಬಲ್ಲೆವು ಎಂಬುದನ್ನು ನಾವು ತಿಳಿದಿರಬೇಕು. ಜೀವನದಲ್ಲಿ ಯಶಸ್ಸನ್ನು ಗಳಿಸಿದವರು ತಮ್ಮ ಶಕ್ತಿ ಹಾಗು ಬಲಹೀನತೆಗಳನ್ನು ಅರಿತು ನಡೆದಿದ್ದರಿಂದ ಜಯ ಸಾಧಿಸಿದರು ಎನ್ನುವುದು ನೆನಪಿರಲಿ. ಒಮ್ಮೆ ಮನಸ್ಸು ಗಟ್ಟಿ ಮಾಡಿ ಬಲಹೀನತೆಯನ್ನು ಕೊಡವಿ ಎದ್ದು ನಿಂತರೆ ಸಾಕು ಬೇಕಾದ ರೀತಿಯಲ್ಲಿ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವ ಸಾಮರ್ಥ್ಯ, ಪ್ರತಿಭೆ, ಚತುರತೆ ಬರುತ್ತದೆ. ಅಂದರೆ ಅಸಹನೀಯ ಕಷ್ಟದ ಪರಿಸ್ಥಿತಿ ಇದ್ದಾಗಲೂ ಫೀನಿಕ್ಸ್ ಪಕ್ಷಿಯಂತೆ ಎದ್ದು ಬರುವಂತೆ ಮಾಡುವ ಶಕ್ತಿ ನೀಡುವುದು ಮಾನಸಿಕ ದೃಢತೆ ಮಾತ್ರ.

ಒಮ್ಮೆ ನಮ್ಮ ಅಂತರಂಗದ ಚೈತನ್ಯದ ಅರಿವು ಮೂಡಿದರೆ ಸಾಕು ಹಿಂದೆ ಬೀಳುವ ಮಾತೇ ಇಲ್ಲ. ಅಂತರಂಗದ ಬಲಹೀನತೆಯನ್ನು ದಾಟಿ ಎದ್ದು ನಿಲ್ಲಬೇಕೆಂದು ದೃಢ ನಿರ್ಧಾರ ಮಾಡಿ ಪ್ರಯತ್ನಿಸಿದರೆ ಸಾಕು ವಾಸ್ತವ ಲೋಕಕ್ಕೆ ಮರಳಿ ನಿರುತ್ಸಾಹದ ಮುದ್ದೆಯಂತಿದ್ದವನು ಚಿಮ್ಮುವ ಚಿಲುಮೆಯಾಗುತ್ತಾನೆ. ಒಮ್ಮೆ ಮಾನಸಿಕ ದೃಢತೆಯನ್ನು ಸಾಧಿಸಿದರೆ ಅದು ಸಮಯದ ಸದುಪಯೋಗವನ್ನು ತಾನಾಗಿಯೆ ಅರಿತು ರೂಢಿಸಿಕೊಳ್ಳುವಂತೆ ಮಾಡುತ್ತದೆ. ಕೆಲಸದ ಶಕ್ತಿಯನ್ನು ಹೆಚ್ಚಿಸುತ್ತದೆ. ಬಲಹೀನ ವ್ಯಕ್ತಿ ಮಾಡುವ ಕೆಲಸಕ್ಕಿಂತ ಹೆಚ್ಚು ಕೆಲಸವನ್ನು ಅದೇ ಸಮಯದಲ್ಲಿ ದೃಢತೆ ಸಾಧಿಸಿದವನು ಮಾಡಿ ಮುಗಿಸುತ್ತಾನೆ. ಏಕೆಂದರೆ ಬಲಹೀನತೆಯಲಿ ತೊಳಲಾಡುವ ವ್ಯಕ್ತಿಯ ಮನಸ್ಸು ಚಿತ್ತಚಾಂಚಲ್ಯದಿಂದ ಕೂಡಿರುತ್ತದೆ. ಅವನಿಗೆ ಏಕಾಗ್ರತೆಯಿಂದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ದೃಢತೆಯುಳ್ಳವನ ಕೆಲಸದಲ್ಲಿ ಗುಣಮಟ್ಟ ಎದ್ದು ಕಾಣುವುದಲ್ಲದೆ ಅವನ ಸಕಾರಾತ್ಮಕ ಧೋರಣೆ ಇತರರ ನಡುವೆ ಎದ್ದು ಕಾಣುವಂತೆ ಮಾಡುತ್ತದೆ.

**ವಿವೇಕದಿಂದ ಸಮಸ್ಯೆ ಪರಿಹಾರ**

ಅಧೈರ್ಯದಿಂದ ಇದ್ದರೆ ಕಷ್ಟಗಳು ನಮ್ಮನ್ನು ಬಿಡದ ಭೂತದಂತೆ ಕಾಡುತ್ತದೆ. ಧೈರ್ಯದಿಂದ ಎದುರಿಸಿದರೆ ತಾವಾಗಿಯೆ ಓಡುತ್ತವೆ. ಭಯದ ಕ್ಷಣಗಳು ಎದುರಾದಾಗ ಮೈ ಮರೆತರೆ ಸಾಕು ಬಲಹೀನತೆ ಬಲವಾಗಿ ವಕ್ರಿಸಿಕೊಳ್ಳುತ್ತದೆ. ಭಯದ ಕ್ಷಣದಲ್ಲಿ ಮನಸ್ಸನ್ನು ಉದ್ವೇಗಕ್ಕೆ, ಆತಂಕಕ್ಕೆ ಎಡೆಮಾಡದೆ ಮನಸ್ಸನ್ನು ಉದ್ವೇಗ ರಹಿತ ಸ್ಥಿತಿಯಲ್ಲಿಟ್ಟುಕೊಂಡು ಯೋಚಿಸಿದಾಗ ಸಮಸ್ಯೆ ದೊಡ್ಡದಾಗಿ ಕಾಣುವುದಿಲ್ಲ. ವಿವೇಕದಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಮರ್ಕಟ ಮನಸ್ಸು ಹೇಳುವುದನ್ನು ಮಾಡುವುದಕ್ಕಿಂತ ಬುದ್ದಿ ಹೇಳುವುದನ್ನು ಪಾಲಿಸಬೇಕು.

**ದೃಢತೆಯಿಂದ ಜಯ**

ಬಲಹೀನತೆಯಿದ್ದವನ ಬಳಿ ಜಯ ಹತ್ತಿರವೂ ಸುಳಿಯುವುದಿಲ್ಲ. ಬಲಹೀನತೆಯ ಮನಃಸ್ಥಿತಿಯಲ್ಲಿ ನಕಾರಾತ್ಮಕತೆಯೆ ರಾರಾಜಿಸುತ್ತಿರುತ್ತದೆ. ನಕಾರಾತ್ಮಕವಾದ, ನನ್ನಿಂದಾಗದು ಎಂಬ ಭಾವವನ್ನು ತೊರೆದು ಹೊರಗೆ ಬರಬೇಕು. ಆಗ ಜಗವೆ ಸುಂದರವಾಗಿ ಕಂಗೊಳಿಸುತ್ತದೆ. ನಾನು ಬಡವ ನನ್ನಷ್ಟು ಕಷ್ಟ ಯಾರಿಗೂ ಇಲ್ಲ ಎಂದು ಕೊರಗುತ್ತಾ ಕೂರುವ ಬದಲು ನಮಗಿಂತ ಹೆಚ್ಚಿನ ಕಷ್ಟದಲ್ಲಿದ್ದು ಏನನ್ನಾದರು ಸಾಧಿಸಿದವರನ್ನು ಮಾದರಿಯಾಗಿಟ್ಟುಕ್ಕೊಳ್ಳಬೇಕು. ಕೀಳರಿಮೆ, ದುಃಖ, ಭಯ, ಚಿಂತೆ, ಬೇಸರ ಸೋಮಾರಿತನದಂತಹ ನಕಾರಾತ್ಮಕ ಭಾವಗಳನ್ನು ಒಂದು ಬಾರಿ ದೃಢಮನಸ್ಸಿನಿಂದ ಒದ್ದು ಓಡಿಸಿಬಿಟ್ಟರೆ ಆಗ ಜೀವನವೆಲ್ಲ ಸಕಾರಾತ್ಮಕವಾಗಿ ಮನಸ್ಸಿನಲ್ಲಿ ಸಂತಸ ಮನೆ ಮಾಡುತ್ತದೆ. ದುಃಖವನ್ನು ದೂರತಳ್ಳಿ ಮನಸಾರೆ ಒಮ್ಮೆ ನಕ್ಕುಬಿಟ್ಟರೆ ಮನದ ಗೊಂದಲಗಳಿಗೆಲ್ಲಾ ಸಕಾರಾತ್ಮಕ ಮನೋಭಾವ ಉತ್ತರಿಸುತ್ತದೆ. ಮಾನಸಿಕ ದೃಢತೆಯನು ಸಾಧಿಸಿದರೆ ಸಂತೋಷ, ಸಂತೃಪ್ತಿ, ಸಮೃದ್ದಿಗೆ ಕೊನೆಯೇ ಇಲ್ಲ. ನಕಾರಾತ್ಮಕತೆಯನ್ನು ದೂರ ತಳ್ಳಿ ದೃಢತೆಯನ್ನು ಅಪ್ಪಿಕೊಳ್ಳಿ ಯಶಸ್ಸು ನಿಮ್ಮದಾಗಿಸಿಕೊಳ್ಳಿ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248